**ದಿನಾಂಕಃ 17.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ. ಎನ್ ಜಿ ವಕೀಲರಿಂದಃ-

ಬಲ್ಲಾಪಟ್ಟಣ ಗ್ರಾಮದ ಸರ್ವೆ ನಂಬರ್ 5ರಲ್ಲಿ ನನ್ನ ತಂದೆ 40X7 ಗಜ ಆಸ್ತಿಯನ್ನು ಪುಟ್ಟಸ್ವಾಮಿಗೌಡ ರವರಿಂದ ಖರೀದಿ ಮಾಡಿದ ದಿನದಂದೇ ವಾದಿಯ ಗಂಡ ಲಿಂಗೇಗೌಡರವರು ಅದೇ ಸರ್ವೆ ನಂಬರ್ ಆಸ್ತಿಯ ನನ್ನ ತಂದೆ ಖರೀದಿ ಮಾಡಿದ 40X7 ಗಜ ವಿಸ್ತೀರ್ಣದ ದಕ್ಷಿಣ ದಿಕ್ಕಿಗೆ ಪುಟ್ಟಸ್ವಾಮಿಗೌಡರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದು ಖರೀದಿ ಮಾಡಿರಬಹುದೇನೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಪರ ವಕೀಲರು ಸಾಕ್ಷಿಗೆ ಧೃಢೀಕೃತ 2 ಕೈ ಬರಹ ಪಹಣಿಗಳು ಒಂದು ಎಂ ಆರ್ ಪ್ರತಿಯನ್ನು ತೋರಿಸಿ ತಮ್ಮ ತಂದೆ ಖರೀದಿ ಮಾಡಿದ ಆಸ್ತಿಯು ಕ್ರಯದಂತೆ ಖಾತೆ ಆಗಿದೆ ಎಂದು ಸಾಕ್ಷಿಗೆ ತೋರಿಸಿ ಕೇಳಲಾಗಿ ಸಾಕ್ಷಿಯು ನೋಡಿ ಓದಿ ನನ್ನ ತಂದೆಯ ಹೆಸರು ನಂಜೇಗೌಡ ಬಿನ್ ಕರೀಗೌಡ ಎಂ ಅರ್ 83/1981-82ರಂತೆ ಖಾತೆ ಆಗಿದೆ ಎಂದು ಸಾಕ್ಷಿಯು ನೋಡಿ ಒಪ್ಪುತ್ತಾರೆ ಒಪ್ಪಿದ ಮೇರೆಗೆ ಎರಡು ಕೈ ಬರಹದ ಪಹಣಿಗಳನ್ನು ನಿಪಿ-16 ಮತ್ತು 17 ಎಂದು, ಮ್ಯೂಟೇಷನ್ ಪ್ರತಿಯನ್ನು ನಿಪಿ-18 ಎಂದು ವಾದಿಯ ಪರ ನಿಶಾನೆಗಳನ್ನಾಗಿ ಗುರುತಿಸಲಾಯಿತು. ಸರ್ವೆ ನಂಬರ್ 5/5ಸಿ ಆಸ್ತಿಗೆ ಇವತ್ತಿಗೂ ಕೂಡ ಪಹಣಿ ಪತ್ರಿಕೆಯಲ್ಲಿ ತಮ್ಮ ತಂದೆಯ ಹೆಸರು ನಮೂದು ಆಗುತ್ತಾ ಬರುತ್ತಿದೆ ಎಂದು ಸಾಕ್ಷಿಗೆ 2025-26ರ ಗಣಕೀಕೃತ ಪಹಣಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ನೋಡಲಾಗಿ ಹೌದು ಎಂದು ಒಪ್ಪಿದ ಮೇರೆಗೆ ಸದರಿ ಪಹಣಿ ಪತ್ರಿಕೆಯನ್ನು ನಿಪಿ-19 ಎಂದು ವಾದಿಯ ಪರ ಗುರುತಿಸಲಾಯಿತು. ವಾದಿಯ ಗಂಡ ಖರೀದಿ ಮಾಡಿದ ಕ್ರಯಪತ್ರದಂತೆ ವಾದಿಯ ಗಂಡನ ಹೆಸರಿಗೆ ನಿಪಿ-6 ರಿಂದ 8ರಂತೆ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಗಂಡ ತೀರಿಕೊಂಡ ನಂತರ ಸರ್ವೆ ನಂಬರ್ 5/5ಡಿ ವಿಸ್ತೀರ್ಣ 3ಗುಂಟೆ ವಾದಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ತಮ್ಮ ತಂದೆ ಖರೀದಿ ಮಾಡಿದ ಆಸ್ತಿಯ ವಿಸ್ತೀರ್ಣದಲ್ಲಿ ತಾವು ಮತ್ತು ವಾದಿಯ ಗಂಡ ಖರೀದಿ ಮಾಡಿದ ಆಸ್ತಿಯ

ವಿಸ್ತೀರ್ಣದಲ್ಲಿ ವಾದಿಯು ಸ್ವಾದೀನ ಇರುತ್ತಾರೆ ಎಂದರೆ ಸಾಕ್ಷಿಯು ಸಂಪೂರ್ಣ ಎಲ್ಲಾ ಅಂದರೆ ವಾದಿಯ ಗಂಡ ಖರೀದಿಸಿದ ವಿಸ್ತೀರ್ಣದಲ್ಲೂ ಸಹ ನಾನು ಮತ್ತು ಇನ್ನುಳಿದ ಪ್ರತಿವಾದಿ ಸ್ವಾದೀನ ಇದ್ದೇವೆ ಎನ್ನುತ್ತಾರೆ. ನನ್ನ ತಂದೆ ಕ್ರಯಪತ್ರದಂತೆ ಖರೀದಿ ಮಾಡಿದ ಆಸ್ತಿಯ ವಿಸ್ತೀರ್ಣಕ್ಕೆ ಮಾತ್ರ ನನಗೆ ಮತ್ತು ಇನ್ನುಳಿದ ಪ್ರತಿವಾದಿಗಳಿಗೆ ಹಕ್ಕು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿದು ವಾದಿಯ ಗಂಡ ಖರೀದಿ ಮಾಡಿದ ಆಸ್ತಿಯಲ್ಲಿ ಸುಮಾರು ವರ್ಷಗಳಿಂದ ಸ್ವಾದೀನದಲ್ಲಿ ಇದ್ದೇವೆ ಎನ್ನುತಾರೆ. ಸಂಪೂರ್ಣ 6 ಗುಂಟೆ ವಿಸ್ತೀರ್ಣದಲ್ಲಿ ತಾವು ಸ್ವಾದೀನ ಇದ್ದೀವಿ ಎಂದು ತೋರಿಸಲು ಪಹಣಿ ಪತ್ರಿಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ತಮ್ಮ ತಂದೆ ಖರೀದಿ ಮಾಡಿದ 3 ಗುಂಟೆ ವಿಸ್ತೀರ್ಣದಲ್ಲಿ ಹಿಂದಕ್ಕೆ ಸ್ವಲ್ಪ ಜಾಗ ಉಳಿಸಿ ಮನೆ ಕಟ್ಟಿದ್ದೇವೆ ಎಂದರೆ ಸಾಕ್ಷಿ 6 ಗುಂಟೆ ವಿಸ್ತೀರ್ಣದಲ್ಲಿ ನಾವು ಸ್ವಾದೀನ ಇದ್ದು ಮನೆ ಕಟ್ಟಿಕೊಂಡು ಸ್ವಲ್ಪ ಖಾಲಿ ಜಾಗ ಬಿಟ್ಟುಕೊಂಡಿದ್ದೇವೆ ಎನ್ನುತ್ತಾರೆ. ತಾವು ಮನೆ ಕಟ್ಟುವ ಪೂರ್ವದಲ್ಲಿ ಕೃಷಿ ಮನೆಯನ್ನು ಮನೆ ಕಟ್ಟಿಕಟ್ಟಲು ಭೂ ಪರಿವರ್ತನೆ ಮಾಡಿಕೊಂಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಮನೆ ಕಟ್ಟಿಕ್ಕೊಳಲು ಗ್ರಾಮ ಪಂಚಾಯಿತಿಯಿಂದ ಪರವಾನಿಗೆ ಮತ್ತು ನಕ್ಷೆಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ತಂದೆ ಖರೀದಿಸಿದ ಆಸ್ತಿಯ ವಿಸ್ತೀರ್ಣಕ್ಕಷ್ಟೆ ನನಗೆ ಮತ್ತು ಇನ್ನುಳಿದ ಪ್ರತಿವಾದಿಗಳಿಗೆ ಹಕ್ಕಿದೆಯೇ ಹೊರತು ವಾದಿಯ ಗಂಡ ಖರೀದಿ ಮಾಡಿದ ಆಸ್ತಿಯ ಮೇಲೆ ನನಗಾಲೀ ಇನ್ನುಳಿದ ಪ್ರತಿವಾದಿಗಳಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ